ಚಿಕ್ಕ ಮಗಳೂರು ಜಿಲ್ಲೆಯಲ್ಲಿರುವ ದರಖಾಸ್ತು ಭೂಮಿ

೮೬೪. ಶ್ರೀಮತಿ ಮೋಟಮ್ಮ (ಮೂಡಿಗೆರೆ).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಿಂದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಜನರಿಗೆ ದರಖಾಸ್ತು ಭೂಮಿಯನ್ನು ನೀಡಲಾಗಿದೆ (ತಾಲ್ಲೂಕ್‌ವಾರು ವಿವರಗಳನ್ನು ನೀಡುವುದು)

ಆ) ಅವರಿಗೆಲ್ಲ ಖಾಯಂ ಸಾಗುವಳಿ ಚೀಟಿ ಪಟ್ಟ ಹಂಚಲಾಗಿದೆಯೇ ?

ಇ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಸಚಿವರು).—

ಅ)

ಸಂಖ್ಯೆ	ತಾಲ್ಲೂಕು	೧೯೮೭-೮೮	೧೯೮೮-೮೯	೧೯೮೯-೯೦	ಒಟ್ಟು
೧	ಚಿಕ್ಕಮಗಳೂರು	೪	೩	೫೫	೬೨
೨	ಮೂಡಿಗೆರೆ	...	...	೧	೧
೩	ಕೊಪ್ಪ	...	...	೧	೧
೪	ಶೃಂಗೇರಿ	...	...	...	...
೫	ತರೀಕೆರೆ	...	...	...	...
೬	ಕಡೂರು	...	...	...	...
೭	ಎನ್.ಆರ್. ಪುರ	...	...	...	...
	ಒಟ್ಟು	೪	೩	೫೭	೬೪

ಆ) ಹೌದು.

ಇ) ಉದ್ಭವಿಸುವುದಿಲ್ಲ.

ಶ್ರೀಮತಿ ಮೋಟಮ್ಮ.—ಮಾನ್ಯ ಅಧ್ಯಕ್ಷರೇ, ಈ ಉತ್ತರದಲ್ಲಿ ನಾನು ಕೇಳಿದ ಪ್ರಶ್ನೆಗೆ ಸರಿಯಾಗಿ ಉತ್ತರ ಕೊಟ್ಟಿಲ್ಲ. ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಎಷ್ಟೆಷ್ಟು ಜಮೀನುಗಳನ್ನು ದರಖಾಸ್ತು ಮೂಲಕ ಮಂಜೂರು ಮಾಡಲಾಗಿದೆ ಎಂದು ಕೇಳಿದ್ದೇನೆ. ಅದಕ್ಕೆ ಉತ್ತರವಾಗಿ ಚಿಕ್ಕಮಗಳೂರು ತಾಲ್ಲೂಕಿನಲ್ಲಿ ೬೨, ಮೂಡಿಗೆರೆಯ ತಾಲ್ಲೂಕಿನಲ್ಲಿ ೧, ಕೊಪ್ಪ ತಾಲ್ಲೂಕಿನಲ್ಲಿ ೧ ಎಂದು ಹೇಳಲಾಗಿದೆ. ನಾನು ಕೇಳುತ್ತಿದ್ದೇನೆ. ಕೊಪ್ಪ, ಶೃಂಗೇರಿ, ತರೀಕೆರೆ, ಕಡೂರು, ಎನ್. ಆರ್. ಪುರ ತಾಲ್ಲೂಕುಗಳಲ್ಲಿ ದರಖಾಸ್ತು ಭೂಮಿಯನ್ನು ಕೇಳಿ ಒಂದು ಅರ್ಜಿಯೂ ಬಂದಿರಲಿಲ್ಲವೇ ? ಆ ಮೇಲೆ ದರಖಾಸ್ತು ಭೂಮಿಯನ್ನು ಕೇಳಿ ಬಂದ ಅರ್ಜಿಗಳ ಒಟ್ಟು ಸಂಖ್ಯೆ ಎಷ್ಟು ? ಮಂಜೂರು ಮಾಡಿರುವ ಜನರುಗಳಲ್ಲಿ ಯಾವ ಯಾವ ವರ್ಗದವರಿಗೆ ಮಂಜೂರು ಮಾಡಲಾಗಿದೆಯೆಂದು ಮಾನ್ಯ ಮಂತ್ರಿಗಳು ಸ್ಪಷ್ಟಪಡಿಸಬೇಕು.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಎಷ್ಟು ಜಮೀನುಗಳಿಗೆ ಪಟ್ಟಾ ಕೊಡಲಾಗಿದೆಯೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಚಿಕ್ಕಮಗಳೂರು ತಾಲ್ಲೂಕಿನಲ್ಲಿ ೧೯೮೭-೮೮ರಲ್ಲಿ ೪ ಜನಕ್ಕೆ ೧೯೮೮-೮೯ರಲ್ಲಿ ೩ ಜನಕ್ಕೆ, ೧೯೮೯-೯೦ರಲ್ಲಿ ೫೫ ಜನಕ್ಕೆ ಮೂಡುಗೆರೆಯಲ್ಲಿ ೧೯೮೯-೯೦ರಲ್ಲಿ ಒಬ್ಬರಿಗೆ, ಕೊಪ್ಪ ತಾಲ್ಲೂಕಿನಲ್ಲಿ ೧೯೮೯-೯೦ರಲ್ಲಿ ಒಬ್ಬರಿಗೆ ಪಟ್ಟಾಗಳನ್ನು ಕೊಡಲಾಗಿದೆ. ಉಳಿದಂತೆ ಇನ್ಯಾರಿಗೂ ಕೊಟ್ಟಿಲ್ಲ. ಹೀಗೆ ಒಟ್ಟು ೬೪ ಜನರಿಗೆ ನೀಡಲಾಗಿದೆ.

ಶ್ರೀಮತಿ ಮೋಟಮ್ಮ.—ಏಕೆ ಹೀಗಾಗಿದೆ ? ಕಳೆದ ಮೂರು ವರ್ಷಗಳಲ್ಲಿ ಚಿಕ್ಕಮಗಳೂರು ತಾಲ್ಲೂಕಿನಲ್ಲಿ ದರಖಾಸ್ತು ಜಮೀನು ಮಾಡಿಕೊಂಡಿರುವವರಿಗೆ ೬೨ ಜನಕ್ಕೆ ಪಟ್ಟಾವನ್ನು ಕೊಡಲಾಗಿದೆಯೆಂದು ಹೇಳಿದ್ದಿರಿ. ಚಿಕ್ಕಮಗಳೂರು, ಮೂಡಿಗೆರೆ, ಕೊಪ್ಪ ತಾಲ್ಲೂಕುಗಳನ್ನು ಬಿಟ್ಟರೆ ಇನ್ನು ಉಳಿದ ತಾಲ್ಲೂಕುಗಳಲ್ಲಿ ದರಖಾಸ್ತು ಭೂಮಿಯನ್ನು ಕೇಳಿ ಯಾರು ಅರ್ಜಿಗಳನ್ನು ಹಾಕಿಕೊಂಡಿರಲಿಲ್ಲವೇ ?

ಶ್ರೀ ಕೆ. ಹೆಚ್. ಪಾಟೀಲ್.—ಒಟ್ಟು ಎಷ್ಟು ಜನರು ಅರ್ಜಿಗಳನ್ನು ಹಾಕಿಕೊಂಡಿದ್ದರು ಎಂದು ಕೇಳಿದ್ದರೆ ಉತ್ತರ ಕೊಡುತ್ತಿದ್ದೆ. ಇಲ್ಲಿ ಎಷ್ಟು ಜನರಿಗೆ ಪಟ್ಟಾಗಳನ್ನು ಕೊಡಲಾಗಿದೆ ಎಂಬುದನ್ನು ಮಾತ್ರ ಹೇಳಿದ್ದೇನೆ. During the last three years, the total extent of 150.33 acres of land has been granted in favour of 64 persons out of which an extent of 52 acres has baen granted in favour of 19 persons belonging to Scheduled Castes and Scheduled Tribes. All the 64 persons have already been given Saguvali Chit or Patta. Details are available in annexure.

ಶ್ರೀಮತಿ ಮೋಟಮ್ಮ.— ಚಿಕ್ಕಮಗಳೂರು ತಾಲ್ಲೂಕಿನಲ್ಲಿ ೬೨ ಜನರಿಗೆ ಪಟ್ಟಾವನ್ನು ಕೊಡಲಾಗಿದೆಯೆಂದು ಹೇಳಿದ್ದೀರಿ. ಇದರಲ್ಲಿ ಯಾವ ಯಾವ ವರ್ಗಕ್ಕೆ ಸೇರಿರುವವರಿಗೆ ಕೊಡಲಾಗಿದೆ, ಹರಿಜನರು ಇದರಲ್ಲಿ ಎಷ್ಟು ಜನರಿದ್ದಾರೆಂಬುದನ್ನು ತಾವು ತಿಳಿಸಬೇಕು?

ಶ್ರೀ ಕೆ. ಹೆಚ್. ಪಾಟೀಲ್.— ಇದರಲ್ಲಿ ೧೯ ಜನರು ಮಾತ್ರ ಹರಿಜನ ಮತ್ತು ಗಿರಿಜನರು ಇದ್ದಾರೆ. ಉಳಿದಂತೆ ಬೇರೆಯವರು.

ಶ್ರೀಮತಿ ಮೋಟಮ್ಮ.— ಚಿಕ್ಕಮಗಳೂರು, ಮೂಡಿಗೆರೆ, ಕೊಪ್ಪ, ತಾಲ್ಲೂಕುಗಳನ್ನು ಬಿಟ್ಟರೆ ಶೃಂಗೇರಿ, ತರೀಕೆರೆ, ಕಡೂರು, ಎನ್. ಆರ್. ಪುರ ತಾಲ್ಲೂಕುಗಳಲ್ಲಿ ದರಖಾಸ್ತು ಭೂಮಿಗೆ ಯಾವ ಅರ್ಜಿಗಳು ಬಂದಿರಲಿಲ್ಲವೆ?

ಶ್ರೀ ಕೆ. ಹೆಚ್. ಪಾಟೀಲ್.— ಅರ್ಜಿಗಳ ಬಗ್ಗೆ ಬೇರೆ ಪ್ರಶ್ನೆಯನ್ನು ತಾವು ಕೇಳಿದರೆ ಉತ್ತರವನ್ನು ತರಿಸಿ ಕೊಡುತ್ತೇನೆ.

ಎನ್. ಜಿ. ಓ. ಗಳ ಮನವಿ

ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಲ್).— ಮಾನ್ಯ ಶಿಕ್ಷಣ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಸರ್ಕಾರ ನಾನ್ ಗೆಜೆಟೆಡ್ ಅಧಿಕಾರಿಗಳ ಸಂಘವು ಬೇಡಿಕೆಗಳ ಬಗ್ಗೆ ಸರ್ಕಾರಕ್ಕೆ ಯಾವುದಾದರೂ ಮನವಿಯು ಬಂದಿದೆಯೆ ?

ಆ) ಹಾಗಿದ್ದಲ್ಲಿ, ಆ ಮನವಿಯ ಸಾರಾಂಶವೇನು ?

ಇ) ಸರ್ಕಾರಿ ನೌಕರರ ಪ್ರತಿಯೊಂದು ಬೇಡಿಕೆಯ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ?

ಈ) ಈ ಬೇಡಿಕೆಗಳನ್ನು ಈಡೇರಿಸುವಲ್ಲಿ ಸರ್ಕಾರಕ್ಕೆ ಇರುವ ತೊಡಕು ಏನು ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—

ಅ) ಹೌದು

ಆ) ಈ ಕೆಳಗಿನ ಬೇಡಿಕೆಗಳು ಮನವಿಯ ಮುಖ್ಯ ಅಂಶಗಳಾಗಿವೆ;

೧) ಸರ್ಕಾರಿ ನೌಕರರಿಗೆ ತಲಾ ರೂ. ೬೦೦–೦೦ರಂತೆ ಎಕ್ಸ್‌ಗ್ರೇಷಿಯಾ ಕೊಡುವುದು;

೨) ಕೇಂದ್ರ ಸರ್ಕಾರಿ ನೌಕರರಿಗೆ ಕೊಡುತ್ತಿರುವ ದರದಂತೆ ಮನೆ ಬಾಡಿಗೆ : ನಗರ ಪರಿಹಾರ ಭತ್ಯೆ ರಾಜ್ಯ ಸರ್ಕಾರಿ ನೌಕರರಿಗೂ ಮಂಜೂರು ಮಾಡುವುದು;

೩) ೧೫ ವರ್ಷಕ್ಕೊಮ್ಮೆ ಸ್ವಯಂಚಾಲಿತ ಬಡ್ತಿ ನೀಡುವುದು;

೪) ವೇತನ ಶ್ರೇಣಿಗಳಿಗೆ ಸಂಬಂಧಿಸಿದ ದೂರುಗಳು ಒಳಗೊಂಡಂತೆ ಸರ್ಕಾರಿ ನೌಕರರ ದೂರುಗಳನ್ನು ಪರಿಶೀಲಿಸಲು 'ಆರ್‌ಬಿಟ್ರೇಷನ್ ಕಮಿಟಿಯ' ರಚನೆ;

೫) ಕಛೇರಿ ವೇಳೆಯನ್ನು ೧೦–೫೦ ರಿಂದ ೫–೫೦ಕ್ಕೆ ನಿಗಧಿಪಡಿಸುವುದು,

೬) ರಜಾ ಪ್ರವಾಸ ಭತ್ಯೆಯ ಸೌಲಭ್ಯದ ಹೊಸ ಬ್ಲಾಕ್ ಅವಧಿಯನ್ನು ಜಾರಿಗೊಳಿಸುವುದು;

೭) ಕರ್ನಾಟಕ ಸೇವಾ ನಿಯಮಾವಳಿಯ ನಿಯಮ ೪೨(ಬಿ)ಯನ್ನು ದಿನಾಂಕ: ೧–೧–೧೯೭೭ರ ಹಿಂದೆ ಇದ್ದಂತೆ ಮತ್ತೆ ಜಾರಿಗೆ ತರುವುದು;